**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ**
**ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ. 1204/2020</u>**

ದಿನಾಂಕಃ. **26.03.2026 .** ರಂದು ಸಾಕ್ಷಿಗೆ ಮದ್ಯಾಹ್ನ **4.15** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

ಚಾಸಾ-**17** ಪ್ರಾಸಾ-**6**

| | |
|---|---|
| ಹೆಸರು | - ಕೆ. ಮಲ್ಲೇಶ್ |
| ತಂದೆ ಹೆಸರು | - ಬಿ. ಕೃಷ್ಣಪ್ಪ |
| ವಯಸ್ಸು | - **46** |
| ಉದ್ಯೋಗ | - ಪೋಲಿಸ್ ಇನ್ಸಪೆಕ್ಟರ್ |
| ವಿಳಾಸ | - ಹಾರೋಹಳ್ಳಿ |

**<u>ಮುಖ್ಯವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದಃ</u>**

ನಾನು ಜೂನ್ **2017** ರಿಂದ ನವೆಂಬರ್ **2019** ರವರೆಗೆ ಕನಕಪುರ ವೃತ್ತದ ಆರಕ್ಷಕ ನಿರೀಕ್ಷಕನಾಗಿ ಕೆಲಸ ನಿರ್ವಹಿಸಿ ದ್ದೇನೆ.

ದಿನಾಂಕಃ **11.01.2019** ರಂದು ಈ ಪ್ರಕರಣದ ಕಡತವನ್ನು ಚಾ.ಸಾ. **16** ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ಅದೇ ದಿನ ಚಾ,ಸಾ. **2** ರವರ ಹೇಳಿಕೆಯನ್ನು ಪಡೆದುಕೊಂಡು ದಿನಾಂಕಃ **18.01.2019** ರಂದು ಟ್ರಾಕ್ಟರ್ ಮತ್ತು ಟ್ರೇಲರ್ ಮಾಲೀಕರಾದ ಚಾ.ಸಾ. **7** ರವರಿಗೆ ಐಎಂವಿ ಕಾಯಿದೆ ಕಲಂ **133** ರಡಿ ನೋಟಸನ್ನು ನೀಡಿದ್ದು ಅವರು ಅದೇ ದಿನ ಉತ್ತರ ನೋಟಿಸ್ ಕೊಟ್ಟು ಕನಕಪುರ ವೃತ್ತ ಕಛೇರಿಯಲ್ಲಿ ಸದರಿ ವಾಹನವನ್ನು ಹಾಜರುಪಡಿಸಿದ್ದು ನಾನು ಅದನ್ನು ಮದ್ಯಾಹ್ನ **12.** ರಿಂದ **12.45** ಗಂಟೆವರೆಗೆ ಪಂಚರಾದ **5** ರಿಂದ **7** ರವರ ಸಮಕ್ಷಮ ಜಪ್ತುಪಡಿಸಿಕೊಂಡು ಮಾಲುಪಟ್ಟಿ **8/2019** ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿದೆ.

ಸಾಕ್ಷಿ ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ಪಂಚನಾಮೆ ಎಂದು ಗುರುತಿಸಿದ್ದು, ಸದರಿ

**ಪಂಚನಾಮೆಯನ್ನು** ನಿಪಿ-**7** ಎಂದು, ಸಾಕ್ಷಿ ಸಹಿಯನ್ನು ನಿಪಿ-**7(ಎ)** ಎಂದು ಗುರುತಿಸಲಾಯಿತು.

ಸಾಕ್ಷಿ ಒಂದು ನೋಟಿಸನ್ನು ನೋಡಿ ಐಎಂವಿ ಕಾಯಿದೆ ಕಲಂ **133** ಅಡಿ ಕೊಟ್ಟ ನೋಟಿಸ್ ಎಂದು ಗುರುತಿಸಿದ್ದು ಅದನ್ನು ನಿ.ಪಿ.**8** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.**8 (ಎ)** ಎಂದು ಗುರುತಿಸಲಾಯಿತು.

ಸಾಕ್ಷಿ ಒಂದು ಉತ್ತ್ರರ ನೋಟಿಸನ್ನು ನೋಡಿ ಸದರಿ ಉತ್ತರ ನೋಟಸ್ ನೋಟಿಸ್ ಎಂದು ಗುರುತಿಸಿದ್ದು ಅದನ್ನು ನಿ.ಪಿ.**9** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.**9 (ಎ)** ಎಂದು ಗುರುತಿಸಲಾಯಿತು.

ದಿನಾಂಕಃ **18.01.2019** ರಂದು ಆರೋಪಿಯನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದೆ. ಅದೇ ದಿನ ಚಾ.ಸಾ. **13** ರವರಿಗೆ ಪತ್ರ ಬರೆದು ವಾಹನ ತಪಾಸಣಾ ವರದಿಯನ್ನು ಕೇಳಿದೆ. ನಂತರ ಚಾ.ಸಾ. **14** ರವರಿಂದ ಶವ ತನಿಖಾ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆ. ಅದೇ ದಿನ ಚಾ.ಸಾ. **1** ಮತ್ತು **2** ರವರ ಮರು ಹೇಳಿಕೆಯನ್ನು ಪಡೆದುಕೊಂಡೆ.

ದಿನಾಂಕಃ **20.01.2019** ರಂದು ವಾಹನ ಮಾಲೀಕರಿಂದ ಇಂಡಿಮಿನಿಟಿ ಬಾಂಡ್ ಅನ್ನು ಪಡೆದುಕೊಂಡು ವಾಹನವನ್ನು ಬಿಡುಗಡೆ ಮಾಡಿದೆ.

ದಿನಾಂಕಃ **06.04.2019** ರಂದು ವಾಹನ ತಪಾಸಣಾ ವರದಿಯನ್ನು ಪಡೆದುಕೊಂಡು ತನಿಖೆಯನ್ನು ಮುಕ್ತಾಯಗೊಳಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ.

ಸಾಕ್ಷಿ ಒಂದು ಪಿ.ಎಂ ವರದಿಯನ್ನು ನೋಡಿ ಸದರಿ ಪಿ.ಎಂ ವರದಿ ಎಂದು ಗುರುತಿಸಿದ್ದು ಅದನ್ನು ನಿ.ಪಿ.**10** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.**10 (ಎ)** ಎಂದು ಗುರುತಿಸಲಾಯಿತು.

ಸಾಕ್ಷಿ ಒಂದು ಐಎಂವಿ ವರದಿಯನ್ನು ನೋಡಿ ಸದರಿ ಐಎಂವಿ ವರದಿ ಎಂದು ಗುರುತಿಸಿದ್ದು ಅದನ್ನು ನಿ.ಪಿ.**11** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.**11 (**ಎ**)** ಎಂದು ಗುರುತಿಸಲಾಯಿತು.

ಸಾಕ್ಷಿ ಒಂದು ಇಂಡಡಿಮಿನಿಟಿ ಬಾಂಡ್ ಅನ್ನು ನೋಡಿ ಸದರಿ ಇಂಡಿಮಿನಿಟಿ ಬಾಂಡ್ ಎಂದು ಗುರುತಿಸಿದ್ದು ಅದನ್ನು ನಿ.ಪಿ.**12** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.**12 (**ಎ**)** ಎಂದು ಗುರುತಿಸಲಾಯಿತು.

ಗೈರು ಹಾಜರಿರುವ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ.ಎಂ.ಜೆ. ವಕೀಲರಿಂದಃ**

ಕೃತ್ಯ ನಡೆದಾಗ ರಾತ್ರಿ **7** ಗಂಟೆ ಆಗಿತ್ತು ಎಂದರೆ ಸರಿ. ಕೃತ್ಯವನ್ನು ಯಾರು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ ಎಂದರೆ ಸರಿಯಲ್ಲ. **2019** ರಲ್ಲಿ ಸಾತನೂರು ಮತ್ತು ಚನ್ನಪಟ್ಟಣ ರಸ್ತೆ ತುಂಬಾ ಕಿರಿದಾದ ರಸ್ತೆ ಎಂದರೆ ಸರಿಯಲ್ಲ. ಭೂಮಿಯಿಂದ ಟ್ರಾಕ್ಟರ್ ಬಂಪರ್ ಗೆ **2** ಅಡಿ ಅಂತರ ಇರುತ್ತದೆ ಎಂದರೆ ಸರಿ. ಭೂಮಿಯಿಂ ಟಿವಿಎಸ್. ವಾಹನದ ಹ್ಯಾಂಡಲ್ಗೆ ಸುಮಾರು **4** ಅಡಿ ಅಂತರ ಇರಬಹುದು ನಿಖರವಾಗಿ ಗೊತ್ತಿಲ್ಲ. ಟ್ರಾಕ್ಟರ್ಗೂ ಮತ್ತು ಟಿವಿಎಸ್. ವಾಹನಕ್ಕೂ ಅಪಘಾತವಾದಾಗ ಟಿವಿಎಸ್ ವಾಹನದ ಹ್ಯಾಂಡಲ್ ಗೆ ಜಖಂ ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದೂರು ಕೊಡಲು ಒಂದು ದಿನ ತಡವಾದ ಬಗ್ಗೆ ದೋಷಾರೋಪಣಾ ಪಟ್ಟಿಯಲ್ಲಿ ಕಾರಣ ನಮೂದು ಮಾಡುವುದು ಅವಶ್ಯಕತೆ ಇರುವುದಿಲ್ಲ ಸಾಕ್ಷಿ ಮುಂದುವರೆದು ದೂರಿನಲ್ಲಿ ಕಾರಣ ನಮೂದಾಗಿರುತ್ತದೆ. ಯಾವುದೇ ಟ್ರಾಕ್ಟರ್ ಟಿವಿಎಸ್. ವಾಹನಕ್ಕೆ ಡಿಕ್ಕಿ ಹೊಡೆದಿರುವುದಿಲ್ಲ ಟಿ.ವಿಎಸ್, ವಾಹನದ ಚಾಲಕ ಅವರೇ ಸ್ವಯಂ ಅಪಘಾತಪಡಿಸಿಕೊಂಡು ಮರಣ ಹೊಂದಿರುತ್ತಾರೆ ಆದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಮೆ ಹಣವನ್ನು ಮೃತರ ಸಂಬಂಧಿಕರು ಪಡೆಯಲು

ಅನುಕೂಲವಾಗಲೆಂದು ಟ್ರ್ಯಾಕ್ಟರ್ ಅಪಘಾತಪಡಿಸಿದ್ದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಯಾವುದೇ ತನಿಖೆ ಮಾಡದಿದ್ದರೂ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ. ವಾಹನ ತಪಾಸಣಾ ವರದಿ , ಪಿ.ಎಂ. ವರದಿ ಅನ್ನು ಪಡೆದುಕೊಂಡು ತನಿಖೆಯಲ್ಲಿ ಆರೋಪಿ ತಪ್ಪು ಮಾಡಿದ್ದಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪುಃ ಮಾಡದೇ ಇದ್ದರೂ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾಹನ ವನ್ನು ಜಪ್ತು ಪಡಿಸಿಕೊಂಡಿಲ್ಲ ಆದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಸಂಜೆ **4.45** ಗಂಟೆವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**3** ನೇ ಅಪರ ಸಿವಿಲ್. ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಕನಕಪುರ